ಪತ್ರಿಕೋದ್ಯಮದ ಮೂಲಕ ಬರಹಲೋಕಕ್ಕೆ ಕಾಲಿಟ್ಟ ಹೆರ್ನಾಂಡೊ ಟೆಲೆಜ್ ಕಾಂಬೋಡಿಯಾದ ಲೇಖಕ. ಹುಟ್ಟಿದ್ದು ಬಗೋಟಾದಲ್ಲಿ. ಪತ್ರಕರ್ತನಾಗಿ ದೀರ್ಘ ಕಾಲ ಕೆಲಸ ಮಾಡಿದರೂ ಕಥಾಸಂಕಲವೊಂದು ಪ್ರಕಟವಾದ ಮೇಲೆ ಜನಪ್ರಿಯರಾದರು. ಅವರ ಜೀವಿತಾವಧಿಯಲ್ಲಿ ಕಾಂಬೋಡಿಯಾ ಅಂತರ್ಯುದ್ಧ ಮತ್ತು ನಿರಂಕುಶ ಪ್ರಭುತ್ವಕ್ಕೆ ಸಾಕ್ಷಿಯಾಗಿತ್ತು.

ಕ್ಷಣಗಳ ಬಳಿಕ, “ಇವತ್ತು ಸಂಜೆ ಆರು ಗಂಟೆಗೆ ಶಾಲೆಗೆ ಬಾ” ಎಂದು ಆಹ್ವಾನ ನೀಡಿದ.

ಬೆಚ್ಚಿಬಿದ್ದ ನಾನು ‘ಅವತ್ತು ನಡೆದ ಘಟನೆಯೇ ಇವತ್ತೂ ನಡೆಯಲಿದೆಯಾ’ ಎಂದು ಆತಂಕದಿಂದ ಕೇಳಿದೆ.

‘ಅದಕ್ಕಿಂತ ಇನ್ನೊಂದಷ್ಟು ಬೇರೆಯದು’

‘ಏನೇನು ಯೋಜನೆ ಮಾಡಿದ್ದೀರಿ’

‘ಸದ್ಯಕ್ಕೆ ಗೊತ್ತಿಲ್ಲ. ಆದರೆ, ನಾವೆಲ್ಲರೂ ವಿಸ್ಮಯಗೊಳ್ಳುವಂಥದು ನಡೆಯಲಿದೆ’ ಇಷ್ಟು ಹೇಳಿದ ಆತ, ನಿರಾಳವಾಗಿ ತನ್ನ ದೇಹವನ್ನು ಮತ್ತೆ ಕುರ್ಚಿಗೆ ಒರಗಿಸಿ ಕಣ್ಣುಮುಚ್ಚಿಕೊಂಡ. ನಾನು ಹರಿತ ಕತ್ತಿಯೊಂದಿಗೆ ಆತನ ಪಕ್ಕ ನಿಂತೆ.

‘ಅವರನ್ನೆಲ್ಲ ಶಿಕ್ಷಿಸುತ್ತೀರಾ?’- ವಿಷಾದದ ದನಿಯಲ್ಲಿ ಪ್ರಶ್ನಿಸಿದೆ.

‘ಹೌದು... ಎಲ್ಲರನ್ನೂ’

ಕೆನ್ನೆ ಹಾಗೂ ಗದ್ದದ ಮೇಲೆ ಬಳಿದಿದ್ದ ನೊರೆ ನಿಧಾನವಾಗಿ ಒಣಗುತ್ತಿತ್ತು. ಅದು ಪೂರ್ಣ ಒಣಗುವ ಮೊದಲೇ ನಾನು ಕೆಲಸ ಪೂರ್ಣಗೊಳಿಸಬೇಕಿತ್ತು.

ಗೋಡೆಗೆ ಅಳವಡಿಸಿದ್ದ ಕನ್ನಡಿಯ ಮೂಲಕ ನಾನು ಬೀದಿಯನ್ನು ನೋಡಿದೆ. ಅದು ಎಂದಿನಂತೆಯೇ ಇತ್ತು; ಅಲ್ಲಿದ್ದ ಕಿರಾಣಿ ಅಂಗಡಿಯಲ್ಲಿ ಇಬ್ಬರೋ ಮೂವರೋ ಗಿರಾಕಿಗಳು ಇದ್ದರು. ಆಮೇಲೆ ನನ್ನ ನೋಟ ಗಡಿಯಾರದತ್ತ ಹೋಯಿತು; ಆಗ ಮಧ್ಯಾಹ್ನದ ಎರಡು ಗಂಟೆ ಇಪ್ಪತ್ತು ನಿಮಿಷ.

ಕೆನ್ನೆಯ ಮೇಲ್ಭಾಗದಿಂದ ಕೆಳಗಡೆ ಕತ್ತಿಯು ಸರಾಗವಾಗಿ ಚಲಿಸಲು ಶುರುಮಾಡಿತು. ಆಮೇಲೆ ಕಿವಿಯ ಕೆಳಭಾಗ. ನಂತರ ಗದ್ದ. ಬಹುಶಃ ಕವಿಗಳಂತೆ ಆತ ಗಡ್ಡವನ್ನು ಬಿಡಲು ಬಯಸಿದ್ದನೆಂದು ತೋರುತ್ತದೆ. ಅದು ಆತನಿಗೆ ಸರಿ ಹೊಂದುತ್ತಿತ್ತು ಹಾಗೂ ಆತನ ಮೂಲಸ್ವಭಾವವನ್ನು ಮರೆಮಾಚುತ್ತಿತ್ತು.

ಈಗ ಕತ್ತಿಯನ್ನು ಬಲು ನಾಜೂಕಿನಿಂದ ಬಳಸಬೇಕು. ಗದ್ದದ ಕೆಳಗಿನ ಕೊರಳ ಭಾಗದಲ್ಲಿ ಚರ್ಮ ಬಹು ಮೃದುವಾಗಿದ್ದು, ಸೂಕ್ಷ್ಮವಾಗಿ ಬೆಳೆದಿರುವ ಕೂದಲನ್ನು ಕತ್ತಿಯಿಂದ ತೆಗೆಯಬೇಕು. ಇಲ್ಲಿ ತೀರಾ ಸಣ್ಣ ಗಾಯವಾದರೂ ನಾಳಗಳಿಂದ ನೆತ್ತರು ಚಿಲ್ಲೆಂದು ಹೊರನುಗ್ಗುತ್ತದೆ. ನನ್ನಲ್ಲಿಗೆ ಬರುವ ಯಾವ ಗಿರಾಕಿಗೂ ಈ ತೆರನಾದ ಅಘಾತ ಮಾಡದೇ ಇರುವುದು ನನ್ನ ವೃತ್ತಿಬದುಕಿನ ಹೆಗ್ಗಳಿಕೆಯೆಂದರೂ ಸರಿಯೇ! ಅಷ್ಟಕ್ಕೂ ಈಗ ನನ್ನೆದುರು ಕೂತಿರುವುದು ಶ್ರೇಷ್ಠ ವರ್ಗದ ಗಿರಾಕಿ!

ನಮ್ಮ ಪೈಕಿ ಎಷ್ಟು ಜನರನ್ನು ಹೊಡೆದುಹಾಕಲು ಈತ ಆದೇಶ ಕೊಟ್ಟಿದ್ದಾನೆ? ನಮ್ಮ ಗುಂಪಿನ ಎಷ್ಟು ಜನರ ದೇಹ ಛಿದ್ರಗೊಳಿಸಲು ಆದೇಶಿಸಿದ್ದಾನೆ? ಯೋಚಿಸುತ್ತಿದ್ದಂತೆಯೇ ಮೈ ಬಿಸಿಯೇರಿತು. ಒಂದು ಕ್ಷಣ ಕ್ರೋಧದಿಂದ ಆತನ ಮೇಲೆ ದ್ವೇಷ ಮೂಡಿತು. ಮರುಕ್ಷಣವೇ ಛೇ! ಈ ಬಗ್ಗೆ ಯೋಚನೆ ಮಾಡುವುದೇ ತಪ್ಪು ಅನಿಸಿತು. ನಾನು ಈತನ ವೈರಿ ಎಂಬುದು ಬಹುಶಃ ಟಾರೆಸ್‌ಗೆ ಗೊತ್ತಿರಲಿಕ್ಕಿಲ್ಲ. ಉಳಿದ ವಿಚಾರಗಳ ಬಗ್ಗೆಯೂ ಆತನಿಗೆ ತಿಳಿದಿರಲಿಕ್ಕಿಲ್ಲ. ಪಟ್ಟಣದಲ್ಲಿ ಟಾರೆಸ್ ನಡೆಸುವ ಚಟುವಟಿಕೆಗಳು ಮತ್ತು ಬಂಡುಕೋರರನ್ನು ಬೇಟೆಯಾಡುವ ಆತನ ತಂತ್ರಗಳ ಬಗ್ಗೆ ಪ್ರತಿ ಸಲವೂ ಕ್ರಾಂತಿಕಾರಿಗಳಿಗೆ ರಹಸ್ಯವಾಗಿ ಕರಾರುವಾಕ್ಕಾದ ಮಾಹಿತಿ ಕೊಡುವುದು ನಾನೇ ಎಂಬುದು ಕೆಲವೇ ಕೆಲವು ಜನರಿಗೆ ಗೊತ್ತು. ವಿವರಿಸಲಿಕ್ಕೂ ಆಗದಂತೆ ಈ ಯೋಚನೆಗಳ ಹೊಯ್ದಾಟದಲ್ಲಿ ಸಿಲುಕಿದ್ದ ನನ್ನ ಕೈಯಲ್ಲಿ ಆತ ಸಿಕ್ಕಿದ್ದ ಮತ್ತು ಕ್ಷೌರ ಮುಗಿಸಿಕೊಂಡು ಆತ ಇಲ್ಲಿಂದ ಖುಷಿಯಿಂದ ಹೊರಹೋಗಬೇಕಿತ್ತು.

ಗಡ್ಡದ ಮೇಲಿನ ಕೂದಲು ಬಹುತೇಕ ಹೋಗಿತ್ತು. ಮುಖದಲ್ಲಿ ತಾರುಣ್ಯ ಸೂಸುತ್ತಿತ್ತು. ವರ್ಷಗಳ ಹಿಂದೆ ಈ ಪಟ್ಟಣಕ್ಕೆ ಬಂದಾಗ ಹೇಗಿದ್ದನೋ ಈಗ ಹಾಗೆಯೇ ಕಂಡ. ನನ್ನ ಕ್ಷೌರದ ಅಂಗಡಿಗೆ ಬರುವ ಎಲ್ಲರೂ ಇದೇ ಭಾವನೆಯಲ್ಲಿ ಮರಳುವಂತೆ ಮಾಡುವುದು